[ **Govt. of Karnataka** **C.R.P. 67]**

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 607/2019**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 3

ಸಾಕ್ಷಿದಾರನ ಹೆಸರು : ಯೋಗೀಶ್ ಪೂಜಾರಿ

ತಂದೆಯ ಹೆಸರು : ಲಿಂಗಪ್ಪ ಪೂಜಾರಿ

ಪ್ರಾಯ : 43 ವರ್ಷ

ಉದ್ಯೋಗ : ಎಲೆಕ್ಟ್ರಿಷನ್

ವಾಸ : ಹೊಸ್ಮಾರು ಕಾರ್ಕಳ

ದಿನಾಂಕ 02-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿಯ ಪರಿಚಯ ನನಗೆ ಇದೆ. ಚಾಸಾ-1 ಮತ್ತು 2 ರವರ ನನಗೆ ಪರಿಚಯ ಇದೆ. ಅವರು ನನ್ನ ಊರಿನವರು. ಚಾಸಾ-1 ಮತ್ತು 2 ರವರು ಈದು ಗ್ರಾಮದ ಒರಿಮಾರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವುದನ್ನು ನಾನು ನೋಡಿರುವುದಿಲ್ಲ. ಅದೇ ಸಮಯಕ್ಕೆ ಅಲ್ಲೇ ರಸ್ತೆ ಬದಿಯ ಪೊದೆಯಲ್ಲಿದ್ದ ಒಬ್ಬ ವ್ಯಕ್ತಿ ಓಡಿ ಬಂದು ಚಾಸಾ-1 ರವರ ಮುಖಕ್ಕೆ ಕೈಯಿಂದ ಹಲ್ಲೆ ನಡೆಸಿರುವುದಿಲ್ಲ. ಹಲ್ಲೆ ಪರಿಣಾಮ ಚಾಸಾ-1 ರವರು ಕೆಳಗೆ ಬಿದ್ದಿರುವುದಿಲ್ಲ. ಹಲ್ಲೆ ನಡೆಸಿದ ವ್ಯಕ್ತಿಯ ಪರಿಚಯ ಇರುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ. ಹಲ್ಲೆ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಆ ವ್ಯಕ್ತಿ ನನಗೆ ಕೈಯಿಂದ ಹಲ್ಲೆ ಮಾಡಿರುವುದಿಲ್ಲ. ಚಾಸಾ-2 ರವರು ಚಾಸಾ-1 ರವರನ್ನು ಉಪಚರಿಸಿರುವುದಿಲ್ಲ. ನಾನು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ದಾಖಲಾಗಿರುವುದಿಲ್ಲ. ಘಟನೆಯ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಯಲ್ಲಿ

ದೂರನ್ನು ನೀಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-

ದಿನಾಂಕ 26-08-2018 ರಂದು ಸಂಜೆ 7.00 ಗಂಟೆಗೆ ಈದು ಗ್ರಾಮದ ಒರಿಮಾರು ರಸ್ತೆಯಲ್ಲಿ ರಿತೇಶ್ ನ ರಿಂಗ್ ಶೆಡ್ ಗಿಂತ ಸುಮಾರು 30 ಮೀಟರು ಮುಂದಕ್ಕೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ನನ್ನ ಮುಂದೆ ಅದೇ ರಸ್ತೆಯಲ್ಲಿ ನನ್ನ ಪರಿಚಯದ ಚಾಸಾ-1 ಮತ್ತು ಚಾಸಾ-2 ರವರು ನಡೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಒರಿಮಾರು ರಿತೇಶ್ ನ ರಿಂಗ್ ಶೆಡ್ ಗಿಂತ ಸುಮಾರು 30 ಮೀಟರು ಮುಂದಕ್ಕೆ ತಲುಪಿದಾಗ ಅಲ್ಲೇ ರಸ್ತೆಯ ಬದಿಯ ಪೊದೆಯಲ್ಲಿದ್ದ ಒಬ್ಬ ವ್ಯಕ್ತಿ ಓಡಿ ಬಂದು ಚಾಸಾ-1 ರವರ ಮುಖಕ್ಕೆ ಕೈಯಿಂದ ಹಲ್ಲೆ ನಡೆಸಿದನು ಎಂದರೆ ಸರಿಯಲ್ಲ. ಹಲ್ಲೆ ಪರಿಣಾಮ ಚಾಸಾ-1 ರವರು ನೆಲಕ್ಕೆ ಬಿದ್ದರು ಎಂದರೆ ಸರಿಯಲ್ಲ. ನಾನು ಹಲ್ಲೆ ನಡೆಸಿದ ವ್ಯಕ್ತಿಯನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೂಡಲೇ ಸ್ಥಳಕ್ಕೆ ಹೋಗಿ ಆರೋಪಿಯನ್ನು ನೀನು ಯಾಕೆ ಅವರಿಗೆ ಹಲ್ಲೆ ಮಾಡುತ್ತಿದ್ದಿ ಎಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕೈಯಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-2 ರವರು ಚಾಸಾ-1 ರವರನ್ನು ಅವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಅದೇ ದಿನ ರಾತ್ರಿ ಕಾರ್ಕಳ

ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯ ಬಗ್ಗೆ 12.30 ಗಂಟೆಗೆ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 31-08-2018 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಬಿ ಕೆ ವಕೀಲರಿಂದ :: ಏನು ಇಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ